# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾವೇರಿ, -581110

## OFFICE OF THE DEPUTY COMMISSIONER, HAVERI, 581110

ದೂರವಾಣಿ : 08375-249044,249024
Téléphone: (Fax) 08375-249088/19
Email: deo.haveri@gmail.com


ನಂ: ಸಿಬ್ಬಂದಿ(1) ಪಹಿ-94 : 2014-15. ದಿನಾಂಕ : 10 -3-2015.

### ಅಧಿಸೂಚನೆ

**ವಿಷಯ:-** ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:-** 1. ಸರ್ಕಾರದ ಅಧಿಸೂಚನೆ ನಂ:ಆರ್‌ಡಿ: 299: ಬಿಎಸ್‌ಸಿ: 2006: ದಿನಾಂಕ: 3-2-2009 ಮತ್ತು 24-7-2009.

2. ಸರ್ಕಾರದ ಪತ್ರ ಕ್ರ:ಕಂಇ:04: ಬಿಎಸ್‌ಸಿ:2011:ದಿ: 25-2-2011
3. ಸರ್ಕಾರದ ಪತ್ರ ನಂ: ಆರ್‌ಡಿ: 33: ಡಿಎಸ್‌ಪಿ: 2012, ದಿನಾಂಕ: 5-6-2012 ಹಾಗೂ 21-6-2012.
4. ಸರ್ಕಾರದ ಸುತ್ತೋಲೆ ಸಂ: ಕಂಇ: 100: ಪಿಎಸ್‌ಸಿ: 2011, ದಿನಾಂಕ: 29-6-2012.
5. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977.

** ** **

ಹಾವೇರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿಮಾಡುವ ಕುರಿತಂತೆ ಉಲ್ಲೇಖ (1) ರಿಂದ (4)ರಲ್ಲಿ ನೀಡಿದ ಆದೇಶದ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಈ ಕೆಳಗಿನ ಶರತ್ತುಗಳಿಗೆ ಒಳಪಟ್ಟು, ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಹುದ್ದೆಗಳ ವಿವರ ಮತ್ತು ವೇತನ ಶ್ರೇಣಿ:**

| | |
|---|---|
| **ಹುದ್ದೆಗಳ ಹೆಸರು** | **: ಸಂಖ್ಯೆ** |
| (ಅ) ಗ್ರಾಮಲೆಕ್ಕಾಧಿಕಾರಿ ಒಟ್ಟು ಹುದ್ದೆಗಳು | : 43 |
| (ಬ) ಬ್ಯಾಕಲಾಗ್ ಹುದ್ದೆಗಳು | : 03 |
| (ಕ) ಪ್ರಸ್ತುತ ಖಾಲಿ ಇರುವ ಹುದ್ದೆಗಳು | : 40 |
| (ಡ) ವೇತನ ಶ್ರೇಣಿ | : 11600-200-12000-250-13000-300-14200-350-15600-400-17200-450-19000-500-21000 |

2. 2012-13 ನೇ ಸಾಲಿನಲ್ಲಿಯ ಗ್ರಾಮಲೆಕ್ಕಿಗರ ನೇರ ನೇಮಕಾತಿಯ ಬ್ಯಾಕಲಾಗ್ ಹುದ್ದೆಗಳು.

| ಕ್ರ. ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವರ್ಗೀಕರಣ | | | | | | | | |
|---|---|---|---|---|---|---|---|---|---|---|---|
| | | | ಪ್ರವರ್ಗ | ಇತರೆ | ಮಹಿಳಾ | ಗ್ರಾಮೀಣ | ಮಾ. ಸೈ | ಕ.ಮಾ ಅ | ಯೋ ನಿರಾ | ಅಂ. ವಿ. | ಒಟ್ಟು |
| 1. | ಗ್ರಾಮ-ಲೆಕ್ಕಾಧಿಕಾರಿ. | 3 | ಪ.ಜಾ | 0 | 0 | 0 | 0 | 1 | 0 | 0 | 1 |
| | | | ಪ್ರ-3(ಬಿ) | 0 | 0 | 0 | 0 | 0 | 0 | 1 (ಇತರೆ) | 1 |
| | | | ಸಾ.ಅ | 0 | 0 | 0 | 0 | 0 | 0 | 1 (ಶ್ರವಣ ದೋಷ) | 1 |
| | ಒಟ್ಟು | | | 1 | 0 | 0 | 0 | 1 | 0 | 1 | 3 |

2014-15 ನೇ ಸಾಲಿನಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಹುದ್ದೆಗಳ ವರ್ಗೀಕರಣ :-

| ಕ್ರ. ಸಂ | ಹುದ್ದೆಯ ಹೆಸರು | ಒಟ್ಟು ಹುದ್ದೆ | ವರ್ಗೀಕರಣ | | | | | | | | |
|---|---|---|---|---|---|---|---|---|---|---|---|
| | | | ಪ್ರವರ್ಗ | ಇತರೆ | ಮಹಿಳಾ | ಗ್ರಾಮೀಣ | ಮಾ. ಸೈ | ಕ.ಮಾ ಅ | ಯೋ ನಿರಾ | ಅಂ. ವಿ. | ಒಟ್ಟು |
| 1. | ಗ್ರಾಮ-ಲೆಕ್ಕಾಧಿಕಾರಿಗಳು. | 40 | ಪ.ಜಾ | 2 | 2 | 0 | 1 | 0 | 1 | 0 | 6 |
| | | | ಪ.ಪಂ | 0 | 1 | 0 | 0 | 0 | 0 | 0 | 1 |
| | | | ಪ್ರವರ್ಗ-1 | 0 | 0 | 1 | 0 | 0 | 0 | 0 | 1 |
| | | | ಪ್ರವರ್ಗ2(ಎ) | 2 | 2 | 1 | 1 | 0 | 1 | 0 | 7 |
| | | | ಪ್ರವರ್ಗ2(ಬಿ) | 0 | 1 | 1 | 0 | 0 | 0 | 0 | 2 |
| | | | ಪ್ರವರ್ಗ3(ಎ) | 0 | 1 | 0 | 0 | 0 | 0 | 0 | 1 |
| | | | ಪ್ರವರ್ಗ3(ಬಿ) | 1 | 0 | 1 | 0 | 0 | 0 | 0 | 2 |
| | | | ಸಾ.ಅ | 4 | 6 | 5 | 2 | 1 | 1 | 1 | 20 |
| | ಒಟ್ಟು | 40 | | 9 | 13 | 9 | 4 | 1 | 3 | 1 | 40 |
| | | | ಹುದ್ದೆಗಳ ವರ್ಗೀಕರಣದ ರೋಸ್ಟರಿನ ಪ್ರಾರಂಭಿಕ ಬಿಂದು:07 ರಿಂದ 46 (2ನೇ ವೃತ್ತ) | | | | | | | | |

(1) ಮಾ.ಸೈ-ಮಾಜಿ ಸೈನಿಕರು (2) ಕ.ಮಾ.ಅ-ಕನ್ನಡ ಮಾಧ್ಯಮ ಅಭ್ಯರ್ಥಿ (3) ಯೋ.ನಿರಾ-ಯೋಜನಾ ನಿರಾಶ್ರಿತರು (4) ಅಂ.ವಿ-ಅಂಗವಿಕಲರು.

2. <u>ವಿದ್ಯಾರ್ಹತೆ:</u>

1. ಕರ್ನಾಟಕ ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ನಡೆಸುವ P.U.C. ಪರೀಕ್ಷೆಯಲ್ಲಿ ತೇರ್ಗಡೆ ಅಥವಾ C.B.S.E. ನಡೆಸುವ 12ನೇ ತರಗತಿ ಅಥವಾ I.C.S.Eಯ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು.
2. ಕರ್ನಾಟಕ ನಾಗರೀಕ ಸೇವೆ (ಕಂಪ್ಯೂಟರ್ ಲಿಟ್ರಸಿ ಟೆಸ್ಟ) ನಿಯಮಗಳು 2012 ರ ನಿಯಮ 2 ರಲ್ಲಿ ನಿಗದಿ ಪಡಿಸಿರುವಂತೆ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಗಳು ಸರ್ಕಾರವು ನಡೆಸುವ ಅಥವಾ ಸರ್ಕಾರದ ಅನುಮೋದಿತ ಏಜೆನ್ಸಿಯವರು ತೆಗೆದುಕೊಳ್ಳುವ ಕಂಪ್ಯೂಟರ್ ಲಿಟ್ರಸಿ ಟೆಸ್ಟ (Computer Literacy Test) ನಲ್ಲಿ ಕನಿಷ್ಠ 60 ಅಂಕಗಳಿಗೆ ಕಡಿಮೆ ಇಲ್ಲದಂತೆ ಪಡೆದು ಆಯ್ಕೆಯಾದ 3 ತಿಂಗಳೊಳಗೆ ಪಾಸು ಮಾಡತಕ್ಕದ್ದು.

3. **ವಯೋಮಿತಿ:** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಈ ಕೆಳಗಿನಂತೆ ವಯೋಮಿತಿ ಹೊಂದಿರತಕ್ಕದ್ದು.

   a. ಪ.ಜಾ/ ಪ.ಪಂ/ ಪ್ರವರ್ಗ-1 : ಕನಿಷ್ಟ 18, ಗರಿಷ್ಟ 40 ವರ್ಷ
   b. ಹಿಂದುಳಿದ ವರ್ಗ : ಕನಿಷ್ಟ18, ಗರಿಷ್ಟ 38 ವರ್ಷ
   c. ಸಾಮಾನ್ಯ ವರ್ಗ. : ಕನಿಷ್ಟ 18, ಗರಿಷ್ಟ 35 ವರ್ಷ

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಟ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

(ಅ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು, ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಟ ವಯೋಮಿತಿಯನ್ನು ಅವನು/ ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವರು ಕೇಂದ್ರ ಸಶಸ್ತ್ರ ಪಡೆಗಳಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

(ಇ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು.

(ಈ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

4. **1. ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ**: 12-03-2015(ಬ್ಯಾಂಕ ವ್ಯವಹಾರದ ಅವಧಿಯೊಳಗಾಗಿ)

   **2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ**: 13-04-2015(ಬ್ಯಾಂಕ ವ್ಯವಹಾರದ ಅವಧಿಯೊಳಗಾಗಿ)

5. **ಅರ್ಜಿ ಶುಲ್ಕ:** 1)ಪರಿಶಿಷ್ಟ ಜಾತಿ/ ಪಂಗಡದ/ ಎಲ್ಲ ಮಹಿಳಾ ಅಭ್ಯರ್ಥಿಗಳಿಗೆ ರೂ. 100-00 (Non refundable)

   2)ಸಾಮಾನ್ಯ/ ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ ರೂ.200-00 (Non refundable) ಶುಲ್ಕವನ್ನು ವೆಬ್‌ಸೈಟ್ http://haveri-va.kar.nic.in ನಲ್ಲಿ ಲಭ್ಯವಾಗುವ ಚಲನ್ನಿನ ಮುದ್ರಿತ ಪ್ರತಿಯನ್ನು ತೆಗೆದುಕೊಂಡು ಖಾತೆ ನಂ.64167508382 ನೇದ್ದಕ್ಕೆ ಯಾವುದಾದರೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ ಬ್ಯಾಂಕಿನ ಶಾಖೆಯಲ್ಲಿ ಪಾವತಿಸಿ ಸ್ವೀಕೃತಿಯನ್ನು ಪಡೆಯಬೇಕು.

6. **ಆಯ್ಕೆ ವಿಧಾನ:** ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬಾರ್ಡಿನೇಟ್ ಬ್ರ್ಯಾಂಚ್) (ವೃಂದ ಮತ್ತು ನೇಮಕಾತಿ (ತಿದ್ದುಪಡಿ) ನಿಯಮಗಳು 2008 ರನ್ವಯ ಅರ್ಹತೆ (ಮೆರಿಟ್) ಆಧಾರದ ಮೇಲೆ ಆಯ್ಕೆಗೆ ಪರಿಗಣಿಸಲಾಗುವದು.

7. **ಅರ್ಜಿ ನಮೂನೆ,ವಿಳಾಸ ಹಾಗೂ ಸಲ್ಲಿಸುವ ವಿಧಾನ:** ಅಭ್ಯರ್ಥಿಗಳು ಅರ್ಜಿಗಳನ್ನು ಇಲಾಖಾ ವೆಬ್‌ಸೈಟ್ http://haveri-va.kar.nic.in ಮುಖಾಂತರ ಆನ್‌ಲೈನ್ ಮೂಲಕ ದಿನಾಂಕ: 12-03-2015 ರಿಂದ ಮಾತ್ರ ಸಲ್ಲಿಸಬೇಕು. ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆನ್‌ಲೈನ್ ಮುಖಾಂತರ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ನಂತರ ಗಣಕಯಂತ್ರದಲ್ಲಿ ಮುದ್ರಿತ ಹಣ ಭರ್ತಿ ಮಾಡುವ ಚಲನ್ ಪಡೆದು ರಾಜ್ಯದ ಯಾವುದೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ ಬ್ಯಾಂಕ್ ಶಾಖೆಯಲ್ಲಿ ನಿಗದಿತ ಹಣ ಸಂದಾಯ ಮಾಡಬೇಕು. ಆನ್‌ಲೈನ್ ಮೂಲಕ ಭರ್ತಿ ಮಾಡಲಾದ ಅರ್ಜಿಯಲ್ಲಿಯ ಮಾಹಿತಿಯ ದಾಖಲೆ ಹಾಗೂ ಈ ಕೆಳಗಿನ ದಾಖಲೆಗಳೊಂದಿಗೆ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾದ ನಂತರ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ಹಾಜರಪಡಿಸತಕ್ಕದ್ದು.

a. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳು.
b. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ/ ಜನ್ಮ ದಿನಾಂಕವನ್ನು ತೋರಿಸುವ ಸಂಚಿತ (ಕ್ಯುಮುಲೇಟಿವ್ ರಿಕಾರ್ಡ) ದಾಖಲೆಯ ಉಧೃತ ಭಾಗ.
c. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಗಳ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)
d. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು ನಮೂನೆ-2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
e. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
f. ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)
g. ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
h. ಯೋಜನೆಗಳಿಂದ ನಿರಾಶ್ರಿತ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

8. **ವಿಶೇಷ ಸೂಚನೆಗಳು:**

a. ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.
b. ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
c. ಈ ಅಧಿಸೂಚನೆಯನ್ವಯ ಅಭ್ಯರ್ಥಿಗಳು ಆಯ್ಕೆಯಾದಲ್ಲಿ ಅಂಥವರು ಹಾವೇರಿ ಜಿಲ್ಲೆಯ ಯಾವುದೇ ತಾಲೂಕಿನಲ್ಲಿ ಸೇವೆ ಸಲ್ಲಿಸಲು ಬದ್ಧರಾಗಿರಬೇಕು.

d. ಮೀಸಲಾತಿ ಕೋರಿದ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಅವರು ಅಂಥಹುಗಳ ಮೀಸಲಾತಿಗೆ ಅನರ್ಹರಾಗುತ್ತಾರೆ.

e. ಪ್ರಕಟಿಸಿರುವ ಹುದ್ದೆಗಳನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಹಕ್ಕು ಆಯ್ಕೆ ಪ್ರಾಧಿಕಾರಿಗಳಿಗೆ ದತ್ತವಾಗಿರುತ್ತದೆ.

f. ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ಆಯ್ಕೆ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು ಹಾವೇರಿ ಇವರು ಕಾಯ್ದಿರಿಸಿಕೊಂಡಿದ್ದಾರೆ.

g. ಸರಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ನೇಮಕ ಪ್ರಾಧಿಕಾರ/ ಇಲಾಖಾ ಮುಖ್ಯಸ್ಥರಿಂದ ನಿಗದಿತ ನಮೂನೆಯಲ್ಲಿ ಹಾಗೂ ಅರ್ಜಿ ಸಲ್ಲಿಸಿದ ದಿನಾಂಕದಂದು ಪ್ರಮಾಣ ಪತ್ರ ಪಡೆದುಕೊಂಡಿರಬೇಕು.

h. ತಪ್ಪು ಮಾಹಿತಿ ಒದಗಿಸಿರುವ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಿರುವುದಿಲ್ಲ.

i. ನೇಮಕಾತಿಗೆ ಖೊಟ್ಟಿ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು.

j. ಜಾತಿ ಅಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ (ಅಧ್ಯಕ್ಷರು, ಮತ್ತು ಜಾತಿ ಆದಾಯ ಪರಿಶೀಲನಾ ಸಮಿತಿ) ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

k. ಆಯ್ಕೆಯು ಸರಕಾರದಿಂದ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.

l. ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ-5882-5889/ 2009 ರಲ್ಲಿನ ಅಂತಿಮ ತೀರ್ಮಾನದ ಷರತ್ತಿಗೊಳಪಟ್ಟಿರುತ್ತದೆ.

<u>9. ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳು.</u> ಮೀಸಲಾತಿ ಸೌಲಭ್ಯ ಆಪೇಕ್ಷಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ನಿಗದಿತ ನಮೂನೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದ ಮೀಸಲಾತಿ) (ತಿದ್ದುಪಡಿ) ನಿಯಮಗಳು 2000ರನ್ವಯ ಸಂಬಂಧಪಟ್ಟ ರೆವಿನ್ಯೂ ಪ್ರಾಧಿಕಾರದಿಂದ ಪಡೆಯಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ, ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು.

- ಪ.ಜಾ/ ಪ.ಪಂ/ : ನಮೂನೆ-ಡಿ (ಸರ್ಕಾರದ ಅಧಿಸೂಚನೆ SWD.132.SAD 97, ದಿ:8-2-2000)
- ಪ್ರವರ್ಗ-1 : ನಮೂನೆ-ಇ (ಸರ್ಕಾರದ ಅಧಿಸೂಚನೆ SWD.132.SAD 97, ದಿ:8-2-2000)
- ಪ್ರವರ್ಗ 2ಎ, 2ಬಿ, 3ಎ, 3ಬಿ : ನಮೂನೆ-ಎಫ್.

10. ಯೋಜನೆ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು:

ಸರಕಾರದ ಅಧಿಸೂಚನೆ ನಂ:ಡಿಪಿಎಆರ್:23:ಎಸ್‌ಆರ್‌ಆರ್:99:ದಿ:23-11-2000ರ ಪ್ರಕಾರ ಶೇಕಡ 5 ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿಡಲಾಗಿದೆ ಈ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರರವರು ನೀಡಿದ ಯೋಜನೆ ನಿರಾಶ್ರಿತರ ಪ್ರಮಾಣ ಪತ್ರ ಪಡೆದುಕೊಂಡಿರಬೇಕು.

11. ಅಂಗವಿಕಲ ಅಭ್ಯರ್ಥಿಗಳು:

ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 9(1-ಎ) ರನ್ವಯ ರಾಜ್ಯ ಸಿವ್ಹಿಲ್ ಸೇವೆಯಲ್ಲಿನ `ಸಿ` ವೃಂದದ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇ. 5 ರಷ್ಟು ಸಮತಳಿ ಮೀಸಲಾತಿ ಕಲ್ಪಿಸಲಾಗಿದೆ. ಅಂಗವಿಕಲ ಅಭ್ಯರ್ಥಿಗಳು ಸರಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್: 52: ಎಸ್‌ಆರ್‌ಆರ್:99:ದಿನಾಂಕ: 29-11-2002 ಹಾಗೂ ಡಿಪಿಎಆರ್: 54: ಎಸ್‌ಆರ್‌ಆರ್: 2012: ದಿನಾಂಕ:23-6-2012 ರನ್ವಯ (1)ಕುಷ್ಠರೋಗದಿಂದ ಗುಣಮುಖರಾದವರು (Leprosy cured) (2) ಮಾನಸಿಕ ಅಸ್ವಸ್ಥತೆ (Mentally ill) ಹಾಗೂ (3) ಶ್ರವಣದೋಷವುಳ್ಳವರು (Hearing Impaired) (4)ವಿಕಲಚೇತನ ಉಳ್ಳವರು (Locomotor Disability) ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದೆ. ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ರಾಜ್ಯದ ಸರಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿರುವ ವೈದ್ಯರು ಅಂಗವಿಕಲರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಹೊಂದಿದವರಾಗಿರುತ್ತಾರೆ. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ: 115: ಸೇನೆನಿ: 2005, ದಿನಾಂಕ: 19-11-2005, ರಲ್ಲಿ ನಿಗಧಿಪಡಿಸಿರುವ ವೈಧ್ಯಕೀಯ ಪ್ರಮಾಣ ಪತ್ರವನ್ನು ಸಕ್ಷಮ ವೈದ್ಯಾಧಿಕಾರಿಗಳಿಂದ ಪಡೆದಿರಬೇಕು ಮತ್ತು ಈ ಪ್ರಮಾಣ ಪತ್ರವನ್ನು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕದೊಳಗೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

12. ಗ್ರಾಮೀಣ ಅಭ್ಯರ್ಥಿಗಳು:

ಗ್ರಾಮೀಣ ಅಭ್ಯರ್ಥಿ ಎಂದರೆ, ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ. ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರಗೆ ವ್ಯಾಸಂಗದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರಿಯಿಂದ ದೃಡೀಕೃತ ಗ್ರಾಮೀಣ ಪತ್ರವನ್ನು ಪಡೆದಿರಬೇಕು. ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ರ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ

ಸಂಬಂಧಿತ ತಹಶೀಲ್ದಾರರವರಿಂದ ಪಡೆಯಬೇಕು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ನಿಗದಿತ ಪ್ರಾಧಿಕಾರಿಗಳಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಮೇಲು ರುಜು ಮತ್ತು ಮೊಹರು ಹಾಕಿಸಿಕೊಂಡಿರಬೇಕು.

ಗ್ರಾಮೀಣ ಮೀಸಲಾತಿ ಕೋರುವ ಪ.ಜಾ/ಪ.ಪಂ/ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ.

13. <u>ಕನ್ನಡ ಮಾಧ್ಯಮ ಅಭ್ಯರ್ಥಿಗಳು:</u>

ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 71 ಎಸ್‌ಆರ್‌ಆರ್ 2001, ದಿ:24-10-2002 ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977.

1977ರ ನಿಯಮ (9) (1) (ಸಿ)ರ ಅನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲ್‌ರುಜು ಮತ್ತು ಮೊಹರು ಹಾಕಿಸಿಕೊಂಡಿರಬೇಕು.

14. <u>ದುರ್ನಡತೆ:</u>

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸಿರುವುದು ಅಥವಾ ನಕಲಿ ಅಂಕಪಟ್ಟಿ/ ಧೃಡೀಕರಣ ಪತ್ರ ಸಲ್ಲಿಸುವುದು ಇತ್ಯಾದಿ ಕಂಡುಬಂದಲ್ಲಿ, ಸದರಿಯವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು. ಮತ್ತು ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವದು.

15. <u>ಅರ್ಹತಾ ಷರತ್ತುಗಳು:</u>

(ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

(ಆ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

(ಇ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈಧ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ. ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

(ಈ) ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

(ಉ) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನ ಕಡ್ಡಾಯವಾಗಿರುತ್ತದೆ.

**ಇತರೇ ಸೂಚನೆಗಳು:**

(1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

(2) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ದಿನಾಂಕದ ಮಾರನೆಯ ದಿನವು ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

(3) ಅಧಿಸೂಚನೆಯೊಂದಿಗೆ ಅಳವಡಿಸಲಾದ ನಿಗದಿತ ನಮೂನೆಗಳಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ಎಲ್ಲ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಪಡೆದುಕೊಂಡು, ಅರ್ಹತೆಯನ್ನು ಹೊಂದಿರಬೇಕು.

ಸಹಿ/- 10/3/15
ಅಧ್ಯಕ್ಷರು,
ಆಯ್ಕೆ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿಗಳು, ಹಾವೇರಿ.

**ಪ್ರತಿ ಗೌರವಪೂರ್ವಕ ಸಲ್ಲಿಸಿದೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2. ರಾಜ್ಯ ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರವರ ಕಛೇರಿ, ಬೆಂಗಳೂರು.
3. ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ.

**ಪ್ರತಿ ಅಭಿನಂದನೆಗಳೊಂದಿಗೆ ಸೂಕ್ತ ಕ್ರಮಕ್ಕೆ:**

1. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಹೊರವಲಯ ಮುದ್ರಣಾಲಯ, 8ನೇ ಮೈಲಿ, ಮೈಸೂರ ರಸ್ತೆ, ಆರ್.ವ್ಹಿ.ಕಾಲೇಜ ಪೋಸ್ಟ್, ಬೆಂಗಳೂರು-58 ಇವರಿಗೆ ಈ ಅಧಿಸೂಚನೆಯನ್ನು ಹಾಗೂ ಇದರ ಲಗ್ತ ಇದ್ದ ಅರ್ಜಿ ನಮೂನೆಯನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವ ಹಾಗೂ ಪ್ರಕಟಿತ ಅಧಿಸೂಚನೆಯ ಪ್ರತಿಗಳನ್ನು ಈ ಕಛೇರಿಗೆ ಕಳಿಸಲು ಕೋರಿದೆ.
2. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಅಭಿನಂದನೆಗಳೊಂದಿಗೆ ಸೂಚನಾ ಫಲಕಕ್ಕೆ ಪ್ರಕಟಿಸುವ ಕುರಿತು ಕೋರಿದೆ.
3. ಉಪ ವಿಭಾಗಾಧಿಕಾರಿಗಳು, ಹಾವೇರಿ/ ಸವಣೂರ ಇವರಿಗೆ ಕಛೇರಿ ಸೂಚನಾ ಫಲಕಕ್ಕೆ ಪ್ರಕಟಿಸಿ ವರದಿ ಸಲ್ಲಿಸುವದು.
4. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಹಾವೇರಿ.
5. ಜಿಲ್ಲಾ ಉಧ್ಯೋಗಾಧಿಕಾರಿಗಳು, ಉಧ್ಯೋಗ ವಿನಿಮಯ ಕೇಂದ್ರ, ಹಾವೇರಿ.
6. ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿಗಳು, ಹಾವೇರಿ ಇವರಿಗೆ ಕಳಿಸುತ್ತಾ, ಮೇಲ್ಕಂಡ ಅಧಿಸೂಚನೆಯನ್ನು ನಿಗಧಿತ ದಿನಾಂಕದೊಳಗಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಕನ್ನಡ ದಿನಪತ್ರಿಕೆಗಳಲ್ಲಿ ಸುದ್ದಿ ರೂಪದಲ್ಲಿ ಪುಕ್ಕಟೆಯಾಗಿ ಪ್ರಕಟಣೆ ಕ್ರಮ ಜರುಗಿಸಲು ಕೋರಿದೆ.
7. ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ, ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಿಸಿ, ಪ್ರಕಟಿಸಿದ ಬಗ್ಗೆ ವರದಿ ಸಲ್ಲಿಸಲು ಸೂಚಿಸಿದೆ.
8. ಕಛೇರಿಯ ಸೂಚನಾ ಫಲಕಕ್ಕೆ.
9. ಕಡತಕ್ಕೆ.

ಸಹಿ/- 10/3/2015
ಕಾರ್ಯದರ್ಶಿಗಳು
ಆಯ್ಕೆ ಪ್ರಾಧಿಕಾರ ಹಾಗೂ
ಅಪರ ಜಿಲ್ಲಾಧಿಕಾರಿಗಳು ಹಾವೇರಿ.

ನಮೂನೆ-1

## ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಢೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಇವರಿಗೆ:
ತಹಸೀಲ್ದಾರರು
...............ತಾಲ್ಲೂಕು
...............ಜಿಲ್ಲೆ

ಮಾನ್ಯರೆ,

ಶ್ರೀ / ಶ್ರೀಮತಿ.................................... ಎಂಬುವವರ ಮಗ/ಮಗಳು/ಪತಿ/ಪತ್ನಿ.........................ಆದ ನಾನು ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ :
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ :
   ತಾಲ್ಲೂಕು :
   ಜಿಲ್ಲೆ :
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ:
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯ/ಪತ್ನಿಯ ಹೆಸರು ಮತ್ತು ಉದ್ಯೋಗ:
   (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮ/ಖಾಸಗಿ)
5. ಅಭ್ಯರ್ಥಿಯ ಪ್ರಸ್ತುತ ವಿಳಾಸ:
   (ಸ್ಪಷ್ಟವಾಗಿ ನಮೂದಿಸುವುದು)
6. ಅಭ್ಯರ್ಥಿಯ ಖಾಯಂ ವಿಳಾಸ:
7. ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ
   ಮಾಧ್ಯಮಿಕ
   ಪ್ರೌಢ
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ) ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ:
   1) ವೇತನ ಶ್ರೇಣಿ
   2) ಜಮೀನಿನ ವಿವರ
   3) ಇತರ ಮೂಲಗಳು
9. ಆದಾಯ ತೆರಿಗೆ ಪಾವತಿದಾರರೇ ?
10. ಸಂಪತ್ತು ತೆರಿಗೆ ಪಾವತಿದಾರರೇ ?
11. ಮಾರಾಟ ತೆರಿಗೆ ಪಾವತಿದಾರರೇ ?

## ಪ್ರಮಾಣೀಕೃತ ಘೋಷಣೆ

ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ಸ್ಥಳ

ದಿನಾಂಕ

ತಮ್ಮ ವಿಧೇಯ

(ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತಾ ಈ ಮಾಹಿತಿಗಳು ಅಸತ್ಯವೆಂದು ದೃಢಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ಧನಾಗಿರುತ್ತೇನೆ.

ಸ್ಥಳ :

ದಿನಾಂಕ :

ತಂದೆ/ತಾಯಿ/ಪೋಷಕರ ಸಹಿ

(ತಂದೆ/ತಾಯಿ ಜೀವಂತವಿಲ್ಲದಿದ್ದರೆ)

(ಹೆಂಡತಿ/ಗಂಡ/ ಇತರ ಸಹಿ)

ಸ್ಥಳೀಯ ಇಬ್ಬರು ಸಾಕ್ಷಿದಾರರು

ಅಭ್ಯರ್ಥಿಯ ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇವೆ.

ಸಾಕ್ಷಿದಾಳರ ಸಹಿ 1)

(ಪೂರ್ಣ ವಿಳಾಸದೊಂದಿಗೆ) 2)

### ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ........................................................ ಎಂಬುವವರ ಮಗ/ಮಗಳು/ಪತಿ /ಪತ್ನಿ / ಶ್ರೀ/ಶ್ರೀಮತಿ/ ಕುಮಾರಿ ............... ಎಂಬುವವರು ಕರ್ನಾಟಕ ರಾಜ್ಯದ ................. ಜಿಲ್ಲೆಯ ವಿಭಾಗ.......................... ಗ್ರಾಮ/ ಪಟ್ಟಣ/ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.

1. ಶ್ರೀ/ಶ್ರೀಮತಿ/ ಕುಮಾರಿ...................................... ಇವರ ತಂದೆ/ತಾಯಿ/ಪೋಷಕರು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ 31.01.1995 ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ (Creamy Layer) ಬರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ

ದಿನಾಂಕ

ತಹಸೀಲ್ದಾರರು

.................. ತಾಲ್ಲೂಕು

ಕಛೇರಿಯ ಮೊಹರು

**ಸೂಚನೆ - 1 :** ಇದರಲ್ಲಿ ಉಪಯೋಗಿಸಲಾದ ''ಸಾಮಾನ್ಯ ನಿವಾಸಿ '' ಎಂಬ ಪದವು 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.

**ಸೂಚನೆ -2 :** ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ 251 ಬಿಸಿಎ 94, ಬೆಂಗಳೂರು, ದಿನಾಂಕ 31.01.1995 ರನ್ವಯ ಮೇಲುಸ್ತರ (Creamy Layer) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.

(ಪ.ಜಾ/ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

# ನಮೂನೆ - ಡಿ

(ನಿಯಮ 3ಎ (2) (3) ನೋಡಿ )

**ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ / ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

## ಪ್ರಮಾಣ ಪತ್ರ

...........................................ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ........................ ಜಿಲ್ಲೆಯ / ವಿಭಾಗದ ........................ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ/ ಶ್ರೀಮತಿ ........................ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ ........................ ಇವರು ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ / ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

* ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳು ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951.

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ರಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲಕ ತಿದ್ದುಪಡಿಯಾದಂತೆ).

* ಸಂವಿಧಾನ
* ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ. 1956.
* ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
* ಸಂವಿಧಾನ (ದಾದರ್ ಮತ್ತು ನಗರ ಹವೇಲಿ) ಅನುಸೂಚಿತ ಜಾತಿಗಳ ಆದೇಶ 1962.
* ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
* ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
* ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988
* ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ / ಕುಮಾರಿ*.................................................................. ಮತ್ತು*/ ಅಥವಾ ಅವನ* / ಅವಳ* ಕುಟುಂಬವು..................................................ರಾಜ್ಯ / ಕೇಂದ್ರಾಡಳಿತ ಪ್ರದೇಶದ ........................ಜಿಲ್ಲಾ/ ವಿಭಾಗದ........................ ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ (ಗಳು)

ಸಹಿ........................................

ತಹಶೀಲ್ದಾರ್........................................

ಸ್ಥಳ :

ದಿನಾಂಕ :

ಪದನಾಮ

ಕಛೇರಿಯ ಮೊಹರಿನೊಂದಿಗೆ

(ಪ್ರವರ್ಗ -1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

## ನಮೂನೆ - ಇ

(ನಿಯಮ 3ಎ (2) (3) ನೋಡಿ)

### ಹಿಂದುಳಿದ ವರ್ಗಗಳಿಗೆ (ಪ್ರ.ವರ್ಗ-1)ಸೇರಿದ ಅಭ್ಯರ್ಥಿಗೆ ನೀಡುವ ಪ್ರಮಾಣ ಪತ್ರ

....................................................ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ಶ್ರೀ/ ಶ್ರೀಮತಿ ....................................................ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ/ಶ್ರೀಮತಿ.............................. ಇವರು ಹಿಂದುಳಿದ ವರ್ಗಗಳ (ಪ್ರವರ್ಗ)................................ ಜಾತಿಯ ................................ ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸ್ಥಳ :

ದಿನಾಂಕ :

ತಹಶಿಲ್ದಾರ್

..........................ತಾಲ್ಲೂಕು

ಕಛೇರಿಯ ಮೊಹರು

**(ಪ್ರವರ್ಗ - 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

## ನಮೂನೆ - ಎಫ್

(ನಿಯಮ 3ಎ (2) (3)ನ್ನು ನೋಡಿ )

## ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ

.............................................. ರಲ್ಲಿ ವಾಸವಾಗಿರುವ ಶ್ರೀ/ ಶ್ರೀಮತಿ ................................ ಇವರ ಮಗ / ಮಗಳು / ಪತಿ/ಪತ್ನಿಯಾದ ಶ್ರೀ/ಶ್ರೀಮತಿ/ಕುಮಾರಿ............................ ಇವರು ಮತ್ತು ಆತನ /ಅವಳ ತಂದೆ /ತಾಯಿ/ ಪೋಷಕರು/ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ 30.03.2002ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರಿಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ/ಪೋಷಕರಾಗಲಿ/ ಪತ್ನಿ /ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು ;

ಅಥವಾ

ಸಾರ್ವಜನಿಕ ವಲಯ ಉದ್ಯಮದಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ ;

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ. 6000-12000/- ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ/ ಆಕೆಯ ತಂದೆ ತಾಯಿ/ಪೋಷಕರು / ಪತ್ನಿ/ಪತಿಯ ಆದಾಯವು ಎರಡು ಲಕ್ಷ ಮೀರುವುದಿಲ್ಲವೆಂದು ;

ಅಥವಾ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ/ಪೋಷಕ / ಪತ್ನಿ /ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ 30.03.2002ರ ಅನ್ವಯ ಶ್ರೀ / ಶ್ರೀಮತಿ/ ಕುಮಾರಿ ................................ ಇವರು ...................... ಜಾತಿಗೆ .................. ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ : ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ 30.03.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ ...................... (2ಎ, 2ಬಿ, 3ಎ, 3ಬಿ) ಸೇರಿರುತ್ತಾರೆ.

ಸ್ಥಳ :

ದಿನಾಂಕ :

ತಹಶೀಲ್ದಾರ್

..........................ತಾಲ್ಲೂಕು

ಕಛೇರಿಯ ಮೊಹರು

## ನಮೂನೆ-

## ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ ಶ್ರೀಮತಿ: ________________________ ರವರ ಮಗ/ ಮಗಳು/ ಪತ್ನಿಯಾದ/ ಶ್ರೀ/ ಶ್ರೀಮತಿ/ ಕುಮಾರಿ ________________________ ಜಿಲ್ಲೆ ____________ ತಾಲೂಕು____________ ಗ್ರಾಮ ____________ ವಾಸವಾಗಿರುವ ಇವರು ____________ ತರಗತಿಯಿಂದ ____________ ತರಗತಿಯವರೆಗೆ ____________ ಜಿಲ್ಲೆ ________ ತಾಲೂಕು ________ ಪಟ್ಟಣ ________ ಶಾಲೆಯಲ್ಲಿ ವ್ಯಾಸಂಗ ಮಾಡಿ ________ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

(ಸಹಿ)

ಮುಖ್ಯೋಪಾಧ್ಯಾಯರು

____________ ಶಾಲೆ

ಮೇಲು ರುಜು

ಕ್ಷೇತ್ರ ಶಿಕ್ಷಣಾಧಿಕಾರಿಗಳು, ________ ತಾಲೂಕು.

---

ಸರಕಾರದ ಸುತ್ತೋಲೆ ನಂ: ಸಿಆಸುಇ: 44 ಸೇನೆನಿ: 2001, ದಿನಾಂಕ: 27-7-2001.

## ನಮೂನೆ

## ಯೋಜನೆಗಳಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿ ಪ್ರಮಾಣ ಪತ್ರ.

ಶ್ರೀ/ ಶ್ರೀಮತಿ: ________________________ರವರ ಮಗ/ ಮಗಳು/ ಪತ್ನಿ/ ಶ್ರೀ/ ಶ್ರೀಮತಿ ________________________ ರವರು ____________ ಜಿಲ್ಲೆ ____________ ತಾಲೂಕು____________ ಗ್ರಾಮದಲ್ಲಿ ವಾಸವಾಗಿರುವ ಇವರು/ ಇವರ ಕುಟುಂಬದವರು ಅವಲಂಬಿತರಾಗಿದ್ದ ಈ ಕೆಳಕಂಡ ಆಸ್ತಿಯನ್ನು ____________ಯೋಜನೆಗಾಗಿ____________ಇಸವಿಯಂದು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ.

i. ವಾಸಿಸುವ ಮನೆ ಮತ್ತು ತಾವು ಅವಲಂಬಿತರಾಗಿದ್ದ ಅವರ ಕೃಷಿ ಭೂಮಿಯ ಅರ್ಧದಷ್ಟು.

ii. ಯೋಜನೆಗೆ ಮೊದಲು ಭೂಮಿಯನ್ನು ಹೊಂದಿರದೇ/ ಯೋಜನೆಯಿಂದ ತಾವು ವಾಸಿಸುತ್ತಿದ್ದ ಮನೆ.

iii. ತಾವು ಅವಲಂಬಿತರಾಗಿದ್ದ ತಮ್ಮ ಕೃಷಿ ಭೂಮಿಯ ಅರ್ಧದಷ್ಟು ಅಥವಾ ಅದಕ್ಕಿಂತ ಕಡಿಮೆ ಕೃಷಿ ಭೂಮಿ

iv. ಇತರೆ ಇನ್ನಾವುದೇ ಪ್ರಕರಣದಲ್ಲಿ ಯೋಜನೆಯಿಂದ ನಿರ್ವಸಿತರಾದವರು.

(ಅನ್ವಯವಾಗುವ ಐಟಂ ಮಾತ್ರ ಪ್ರಮಾಣ ಪತ್ರದಲ್ಲಿ ನಮೂದಿಸತಕ್ಕದ್ದು)

ತಹಶೀಲ್ದಾರ

____________ ತಾಲೂಕು

ಸರಕಾರದ ನಂ: ಸಿಆಸುಇ: 96: ಸೆನನಿ: 2005, ದಿನಾಂಕ: 10-8-2005.

## ನಮೂನೆ-2

## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ ಶ್ರೀಮತಿ: ______________________________

ಎಂಬುವವರ ಮಗ/ ಮಗಳು/ ಪತ್ನಿ/ ಶ್ರೀಮತಿ/ ಕುಮಾರಿ ______________________ ಜಿಲ್ಲೆ______________ ತಾಲೂಕು: ______________ ಗ್ರಾಮದಲ್ಲಿ ________________ ವಾಸವಾಗಿರುವ ಇವರು ________________ ತರಗತಿಯಿಂದ ____________________ನೇ ತರಗತಿಯ ವರೆಗೆ ________________ ಜಿಲ್ಲೆ ________________ ತಾಲೂಕು ____________ ಗ್ರಾಮದ ಶಾಲೆಯಲ್ಲಿ ವ್ಯಾಸಂಗ ಮಾಡಿ, ________________ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕದ ಪೌರ ನಿಯಮಗಳು ಅಧಿನಿಯಮ 1976 ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿದೆ.

ಮೇಲು ರುಜು
ಕ್ಷೇತ್ರ ಶಿಕ್ಷಣಾ ಅಧಿಕಾರಿ
ಕಛೇರಿಯ ನೊಹರು

ಸಹಿ
ಮುಖ್ಯೋಪಾಧ್ಯಾಯರ ಸಹಿ
ಮತ್ತು ಸಂಸ್ಥೆಯ ಮೊಹರು

ಸ್ಥಳ :
ದಿನಾಂಕ:

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ. ಪಿಆಸುಇ ೧೧೫ ಸೆನಿ ೨೦೦೫, ದಿನಾಂಕ ೧೯.೧೧.೨೦೦೫.

# CERTIFICATE FOR THE PERSONS WITH DISABILITIES

This is to certify that........................................................................................................

Sri./Smt/Kum.................................................................................................................

of Shri..........................................................................................son/wife/daughter

male/female, Registration No..........................................................Age..................old,

...................................................................................................................is a case of

...............................................................................................................He/She

is physically disabled/ visual disabled/speech & hearing disabled and has.................................... ...................%(..............................Percent) Permanent (Physical impairment/Visual impairment Speech & hearing impairment) in relation to his/her...................................

Note:

1. This condition is progressive/non-progressive/likely to improve/not likely to improve*
2. Re-assessment is not recommended/is recommended after a period of ...........................................months/Years*.

*Strike out which is not applicable

(Recent Attested Photograph showing the disability affixed here)

Sd/-
(DOCTOR)
(Seal)

Sd/-
(DOCTOR)
(Seal)

Sd/-
(DOCTOR)
(Seal)

Signature/Thump impression of the disabled person.

Countersigned by the Medical Superintendent CMO/Head of Hospital (With seal)